ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೫ನೇ ಜೂನ್ ೧೯೯೦, ಜ್ಯೇಷ್ಠ ೧೫ ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೫ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು].

ಶುಭಾಶಯಗಳು

ಅಧ್ಯಕ್ಷರು.—ಇಂದು ಶ್ರೀ ಜಿ.ಎಸ್ ಆಚಾರ್, ಶ್ರೀ ಎಸ್.ಕೆ ದಾಸಪ್ಪ ಮತ್ತು ಶ್ರೀ ದಿವೇಟರ್ ಪಂಲ್ಲಿಕಾರ್ಜುನಪ್ಪ ಒಸಪ್ಪ ಅವರುಗಳ ಹುಟ್ಟಿದ ದಿವಸ. ನನ್ನ ಪರವಾಗಿ, ಸದನದ ಎಲ್ಲಾ ಸದಸ್ಯರ ಪರವಾಗಿ ಅವರಿಗೆ ಹಾರ್ದಿಕ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದ ಅರಣ್ಯವನ್ನು ಲೂಟಿ ಮಾಡುತ್ತಿರುವ ವೀರಪ್ಪನ್ ಬಗ್ಗೆ ಶೋಧನೆ

೫೯೯. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅರಣ್ಯವನ್ನೇ ಲೂಟಿ ಮಾಡುತ್ತಿರುವ ವೀರಪ್ಪನ್ ಶೋಧನೆಯ ಕಾರ್ಯ ಯಾವ ಹಂತದಲ್ಲಿದೆ ?

ಆ) ಈ ಬಗ್ಗೆ ಪತ್ರಿಕೆಗಳಲ್ಲಿ ಆಮಾದಿಸಲ್ಪಟ್ಟಿರುವ ಪ್ರಭಾವಿಗಳನ್ನು ಪತ್ತೆ ಮಾಡಲಾಗಿದೆಯೆ ?

ಇ) ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—

ಅ) ಗಂಧದ ಕಳ್ಳಸಾಗಾಣಿಕೆದಾರನಾದ ವೀರಪ್ಪನ್ ಮತ್ತು ಅವನ ಸಹಚರರನ್ನು ಹುಡುಕಲು ಂ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ಸಂಬಂಧದಲ್ಲಿ ಇದುವರೆಗೆ ೫೬ ವ್ಯಕ್ತಿಗಳನ್ನು ಬಂಧಿಸಲಾಗಿದೆ. ವೀರಪ್ಪನ್ ಮತ್ತು ಅವನ ಸಹಚರರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸುವ ಕೆಲಸಕ್ಕಾಗಿಯೇ ಸರಕಾರವು ದಿನಾಂಕ ೧೮-೪-೯೦ರಲ್ಲಿ ಪೋಲೀಸ್, ಇನ್ಸ್‌ಪೆಕ್ಟರ್ ಜನರಲ್ ''ಟಾಸ್ಕ್ ಫೋರ್ಸ್'' (ಫ್ಲಾರೆನ್ಸ್ ಸೆಲ್) ಎಂಬ ಪ್ರತ್ಯೇಕ ಹುದ್ದೆಯನ್ನು ಮಂಜೂರು ಮಾಡಿ ಎಂ.ಎಂ. ಹಿಲ್ಸ್‌ನಲ್ಲಿ ಕೇಂದ್ರ ಕಾರ್ಯಸ್ಥಾನ ಹೊಂದಿ ಕಾರ್ಯಾಚರಣೆ ನಡೆಸಲು ಆದೇಶಿಸಿದೆ. ಪ್ರಸಕ್ತ ''ಟಾಸ್ಕ್ ಫೋರ್ಸ್'' ಅರಣ್ಯ ಇಲಾಖೆ ಮತ್ತು ತಮಿಳುನಾಡು ಪೋಲೀಸರ ಸಂಪರ್ಕದೊಂದಿಗೆ ವೀರಪ್ಪನ್ ಮತ್ತು ಅವನ ಸಹಚರರನ್ನು ಬಂಧಿಸಲು ಅತಿ ತೀವ್ರತರವಾದ ಕಾರ್ಯಾಚರಣೆ ನಡೆಸುತ್ತಿದೆ.

ಆ) ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಭಾವಿ ವ್ಯಕ್ತಿಗಳ ಕೈವಾಡದ ಬಗ್ಗೆಯೂ ಟಾಸ್ಕ್ ಫೋರ್ಸ್ ಅಧಿಕಾರಿಗಳು ತೀವ್ರ ಗಮನಹರಿಸಿದ್ದಾರೆ.

ಇ) ಅನ್ವಯಿಸುವುದಿಲ್ಲ.